		43	ಕೊಳ್ಳೇಗಾಲ
		44	ಯಳಂದೂರು
21.	ಚಿಕ್ಕಬಳ್ಳಾಪುರ	45	ಗೌರಿಬಿದನೂರು
		46	ಬಾಗೇಪಲ್ಲಿ
22.	ಯಾದಗಿರಿ	47	ಯಾದಗಿರಿ
23.	ಚಿತ್ರದುರ್ಗ	48	ಚಳ್ಳಕೆರೆ
24.	ಬಿಜಾಪುರ	49	ಮುದ್ದೇಬಿಹಾಳ
		50	ಇಂಡಿ

ಕೈಗಾರಿಕಾ ನಿವೇಶನಗಳು

1264(1919); ಶ್ರೀ ಡಾ॥ ಉಮೇಶ್ ಜಿ. ಜಾಧವ್ (ಚಿಂಚೋಳಿ)

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಗುಲ್ಬರ್ಗಾ ಜಿಲ್ಲೆಯಲ್ಲಿ ನಿರ್ಮಾಣ ಮಾಡಿರುವ ಒಟ್ಟು ಕೈಗಾರಿಕಾ ನಿವೇಶನಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮತ್ತು ತಾಲ್ಲೂಕುವಾರು 3 ವರ್ಷದ ಮಾಹಿತಿ ಒದಗಿಸುವುದು);

ಆ) ಈ ನಿವೇಶನಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸುವ ನಿವೇಶನಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮತ್ತು ತಾಲ್ಲೂಕುವಾರು 3 ವರ್ಷದ ಮಾಹಿತಿ ಒದಗಿಸುವುದು);

ಇ) ಈ ಮೀಸಲು ನಿವೇಶನಗಳನ್ನು ಆಯಾ ಜನಾಂಗದವರಿಗೆ ಹಂಚಲಾಗಿದೆಯೇ (ವಿವರ ನೀಡುವುದು)?

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯವರು)

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಕಪನೂರ ಕೈಗಾರಿಕಾ ಪ್ರದೇಶದ 3ನೇ ಹಂತದಲ್ಲಿ 53–48 ಎಕರೆ ಜಮೀನನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಒಟ್ಟು 67 ಕೈಗಾರಿಕಾ ನಿವೇಶನಗಳನ್ನು ನಿರ್ಮಾಣ ಮಾಡಲಾಗಿದೆ.

ಆ) ಒಟ್ಟು 17 ನಿವೇಶನಗಳನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಲಾಗಿದೆ.

ಇ) ಕೈಗಾರಿಕಾ ಪ್ರದೇಶದ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದ್ದು, ಪೂರ್ಣಗೊಂಡನಂತರ ನಿವೇಶನಗಳನ್ನು ಹಂಚಲಾಗುವುದು.

ಜಲ್ಲಿ ಕ್ರಷರ್ ಘಟಕಗಳು

1265(1585); ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಜಲ್ಲಿ ಕ್ರಷರ್ ಘಟಕಗಳು ಎಷ್ಟು; ಹೊಸದಾಗಿ ಜಲ್ಲಿ ಕ್ರಷರ್ ಘಟಕ ಪ್ರಾರಂಭಿಸಲು ಇರುವ ಮಾನದಂಡಗಳೇನು?

ಆ) ಬೀದರ್ ಜಿಲ್ಲೆಯಲ್ಲಿ ಎಷ್ಟು ಜಲ್ಲಿ ಕ್ರಷರ್ ಘಟಕಗಳು ಕ್ರಮಬದ್ಧವಾಗಿ ಪರವಾನಗಿ ಪಡೆದು ಕಾರ್ಯನಿರ್ವಹಿಸುತ್ತಿವೆ;

ಇ) ಜಲ್ಲಿ ಕ್ರಷರ್ ಘಟಕಗಳನ್ನು ಅಕ್ರಮವಾಗಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಈ ಘಟಕಗಳನ್ನು ಸಕ್ರಮಗೊಳಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು)

ಅ) ರಾಜ್ಯದಲ್ಲಿ 899 ಜಲ್ಲಿ ಕ್ರಷರ್ ಘಟಕಗಳು ಕಾರ್ಯನಿರ್ವಹಿಸುತ್ತಿವೆ.